ಅ) ಆ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಎಷ್ಟು ?

ಇ) ಪುರುಷ ಆರಕ್ಷಕ ಉಪನಿರೀಕ್ಷಕರಿಗೆ ನೀಡುವ ಎಲ್ಲಾ ಸೌಲಭ್ಯಗಳನ್ನು ಮಹಿಳಾ ಆರಕ್ಷಕ ಉಪನಿರೀಕ್ಷಕರಿಗೂ ನೀಡಲಾಗುವುದೇ ?

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಯವರು).—

ಅ) ಪ್ರಸ್ತುತ ಪೋಲೀಸ್ ಇಲಾಖೆಯ ವಿವಿಧ ವಿಭಾಗಗಳಲ್ಲಿ ೨೧ ಮಹಿಳಾ ಪೋಲೀಸ್ ಸಬ್ ಇನ್ಸ್‌ಪೆಕ್ಟರುಗಳು ಕೆಲಸ ಮಾಡುತ್ತಿದ್ದಾರೆ.

ಆ) ಪರಿಶಿಷ್ಟ ಜಾತಿ ೪

ಪರಿಶಿಷ್ಟ ಪಂಗಡ ಯಾರೂ ಇಲ್ಲ

ಇ) ಹೌದು.

ಈ) ಉದ್ಭವಿಸುವುದಿಲ್ಲ.

ಕಲಘಟಗಿಯಲ್ಲಿ ಪಶುವೈದ್ಯ ಹಾಸಿಗೆಯುಳ್ಳ ಆಸ್ಪತ್ರೆಗೆ ಮಂಜೂರಾತಿ

೯೫೦. ಶ್ರೀ ಪಿ. ಸಿ. ಸಿದ್ದನಗೌಡ್ರ (ಕಲಘಟಗಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಲಘಟಗಿಯಲ್ಲಿ ೩೦ ಹಾಸಿಗೆಯುಳ್ಳ ಆಸ್ಪತ್ರೆಯನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಗಮನದಲ್ಲಿ ಇದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಇಲ್ಲ.

ಆ) ಆಯವ್ಯಯ ಪಟ್ಟಿಯಲ್ಲಿ ಸಾಕಷ್ಟು ಹಣವನ್ನು ಒದಗಿಸಿ ಜಿಲ್ಲಾ ಪರಿಷತ್ತು ಶಿಫಾರಸ್ಸು ಮಾಡಿದಲ್ಲಿ ಪರಿಶೀಲಿಸಲಾಗುವುದು.

ಸಾರಿಗೆ ಬಸ್‌ಗಳಲ್ಲಿ ಜಿಲ್ಲಾ ಪರಿಷತ್ ಮಂಡಲ್ ಪಂಚಾಯತಿಗಳ ಸದಸ್ಯರಿಗೆ ಉಚಿತ ಪಾಸಿ ಬಸ್ ಪ್ರಯಾಣ ಒದಗಿಸುವುದು.

೯೦೯. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾಜಿ ಶಾಸಕರಿಗೆ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತಿ ಸದಸ್ಯರಿಗೆ ಉಚಿತವಾಗಿ ಬಸ್ ಪ್ರಯಾಣ ಮಾಡಲು ಅವಕಾಶ ಕಲ್ಪಿಸಿಕೊಡಲಾಗುವುದೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿ).—

ಅ) ಇಲ್ಲ.